ಕ್ಯೂಸೆಕ್ಸ್ ನೀರು ಹರಿದರೆ ಮೂರು-ನಾಲ್ಕು ಗ್ರಾಮಗಳು ಕೊಚ್ಚಿ ಹೋಗುವ ಸಂಭವ ಕೂಡ ಇದೆ. ಅದಕ್ಕೋಸ್ಕರ ಡಿ.ಸಿ.ಯವರು ಹೇಳುತ್ತಿದ್ದರು, ಇಲ್ಲಿ ಬಹುಶಃ ಆರ್ಮಿ ಹೆಲ್ಪ್‌ನ್ನೂ ಕೂಡ ತೆಗೆದುಕೊಳ್ಳುವ ಸಂಭವ ಬರಬಹುದೆನ್ನುವ ವಿಷಯವನ್ನು ಹೇಳುತ್ತಿದ್ದರು. ಅದಕ್ಕೋಸ್ಕರವಾಗಿ ನಾನು ಸರ್ಕಾರದ ಗಮನವನ್ನು ಸೆಳೆದು ಇದರ ಬಗ್ಗೆ ತುರ್ತು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ನಾನು ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ನಿನ್ನೆ ಇಲ್ಲಿ ನಮ್ಮ ಚಿಕ್ಕಮಗಳೂರು ಶಾಸಕರು ಮತ್ತು ಶಿವಮೊಗ್ಗದ ಶ್ರೀ ಯಡಿಯೂರಪ್ಪನವರು ಮತ್ತು ಇನ್ನೊಬ್ಬರು ಸಾಗರದ ಶಾಸಕರು ಶ್ರೀ ಹಾಲಪ್ಪನವರು ರೈಜ್ ಮಾಡಿದಾಗ ನಾನು ಹೇಳಿದ್ದೇನೆ. ತಕ್ಷಣ ಹೋಗಿ ನಾನು ನಿನ್ನೆ ಇಲ್ಲಿ ಮಾತನ್ನು ಕೊಟ್ಟ ಮೇಲೆ ಮುಖ್ಯ ಕಾರ್ಯದರ್ಶಿಗಳವರು ಹೈದರಾಬಾದ್‌ನಲ್ಲಿದ್ದರು. ಅವರನ್ನು ಕಾಂಟಾಕ್ಟ್ ಮಾಡಿದೆ. ರೆವಿನ್ಯೂ ಸೆಕ್ರೆಟರಿ ಕೂಡ ಹೈದರಾಬಾದ್‌ನಲ್ಲೇ ಇದ್ದರು. ಅವರನ್ನೂ ಕೂಡ ಕಾಂಟಾಕ್ಟ್ ಮಾಡಿ, ಮಾನ್ಯ ಎಂ.ಪಿ. ಪ್ರಕಾಶ್ ಅವರ ಜೊತೆಯಲ್ಲಿ ಕೂಡ ಮಾತನಾಡಿ ತಕ್ಷಣ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳಿ, ಅಂದರೆ ಫ್ಲಡ್ ರಿಲೀಫ್ ಫಂಡ್ ಅಡಿಯಲ್ಲಿ ಮತ್ತು ನ್ಯಾಚುರಲ್ ಕೆಲಾಮಿಟಿ ಫಂಡ್ ಕೆಳಗೆ ಮಾಡಬೇಕೆಂದು ಹೇಳಿದ್ದೆ. ಅದನ್ನು ನಾನು ಇವತ್ತು ಪುನಃ ವಿಚಾರಿಸಿದ್ದೇನೆ. ಇವತ್ತು ಅವರು ಹಣವನ್ನು ರಿಲೀಸ್ ಮಾಡಿದ್ದಾರೆ. ನಮ್ಮ ಎಲ್ಲೆಲ್ಲಿ ಇಂಥ ನೀರಿನ ಹಾವಳಿ ಇದೆ, ಅಂಥ ಕಡೆಯೆಲ್ಲಾ ಹಣ ಬಿಡುಗಡೆ ಮಾಡಬೇಕೆಂದು ಹೇಳಿ ಇವತ್ತು ಸುಮಾರು ಈ ಹಿಂದೆ 22 ಕೋಟಿ ರೂಪಾಯಿ ನ್ಯಾಚುರಲ್ ಕೆಲಾಮಿಟಿ ಫಂಡ್‌ನಲ್ಲಿ ರಿಲೀಸ್ ಮಾಡಿದ್ದೆ. ಈಗ ಮತ್ತೆ ಸುಮಾರು 10-12 ಕೋಟಿ ರೂಪಾಯಿ ಇವತ್ತು ಬಿಡುಗಡೆ ಮಾಡಿದ್ದಾರೆ. ಆ ಜಿಲ್ಲಾಧಿಕಾರಿಗಳಿಗೆ ಆ ಹಣ ಈಗಾಗಲೇ ತಲುಪುತ್ತದೆ. ಆದರೆ ಪೆಂಡಿಂಗ್ ಆ ದುಡ್ಡು ಬರುವವರೆಗೆ ವಾರ್ ಫುಟಿಂಗ್‌ನಲ್ಲಿ ಅಂಥ ಕಡೆ ಕೆಲಸಗಳನ್ನು ತೆಗೆದುಕೊಳ್ಳಬೇಕೆನ್ನುವ ಸೂಚನೆಯನ್ನು ಕೊಡಬೇಕೆಂದು ಹೇಳಿ ನಾನು ನಮ್ಮ ಮುಖ್ಯ ಕಾರ್ಯದರ್ಶಿಗಳ ಮುಖಾಂತರ ನಿನ್ನೆ ತಿಳಿಸಿದ್ದೇನೆ. ಖಂಡಿತವಾಗಿಯೂ ಕೂಡ ಆ ಕೆಲಸವನ್ನು ನ್ಯಾಚುರಲ್ ಕೆಲಾಮಿಟಿ ಫಂಡ್‌ನಲ್ಲಿ ತೆಗೆದುಕೊಂಡು ಅದರ ರಿಪೇರಿ ಮಾಡತಕ್ಕದ್ದು ಮಾಡುತ್ತಾರೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ಉಳಿದ ಕೆಲಸಕ್ಕೂ ಕೂಡ ಹಣ ಖರ್ಚು ಮಾಡುವುದಕ್ಕೆ ಅವರ ಹತ್ತಿರ ಇದೆ. ಹಣ ಇಲ್ಲವೆಂದರೆ ಪುನಃ ನಾನು ತಕ್ಷಣ ನಮ್ಮ ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳವರು ಬಂದಿರಬಹುದು; ಅವರನ್ನು ಸಂಪರ್ಕ ಮಾಡಿ ಮತ್ತು ರೆವಿನ್ಯೂ ಸೆಕ್ರೆಟರಿಯವರನ್ನು ಸಂಪರ್ಕ ಮಾಡಿ ಕೊಡಗು ಜಿಲ್ಲೆಗೂ ಕೂಡ ಹಣವನ್ನು ಬಿಡುಗಡೆ ಮಾಡಿಸತಕ್ಕದ್ದನ್ನು ನಾನು ಮಾಡುತ್ತೇನೆ.

8. ಮಂತ್ರಿಗಳ ಹೇಳಿಕೆ:

ವಿಷಯ: ರಾಜ್ಯದ ಸ್ವಾತಂತ್ರ್ಯ ಯೋಧರಿಗೆ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಗಳ ಬಸ್ಸುಗಳಲ್ಲಿ ಹೆಚ್ಚಿನ ಅನುಕೂಲತೆಯನ್ನು ಒದಗಿಸುವ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಸಾರಿಗೆ ಹಾಗೂ ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಸ್ವಾತಂತ್ರ್ಯ ಯೋಧರಿಗೆ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಗಳ ಬಸ್‌ಗಳಲ್ಲಿ ಹೆಚ್ಚಿನ ಅನುಕೂಲತೆಯನ್ನು ಒದಗಿಸುವ ಬಗ್ಗೆ, ಅವರದು ಒಂದು ಬೇಡಿಕೆ ಇತ್ತು. ಏನೆಂದರೆ ಈ ಕರ್ನಾಟಕ ರಾಜ್ಯದಲ್ಲಿ ಸುಮಾರು 4500 ಸ್ವಾತಂತ್ರ್ಯ ಯೋಧರುಗಳಿಗೆ ಈಗಾಗಲೇ

ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಗಳ ಸಾಮಾನ್ಯ ವೇಗಧೂತ ಬಸ್‌ಗಳಲ್ಲಿ ಕರ್ನಾಟಕ ರಾಜ್ಯದ ಗಡಿ ಒಳಗೆ ಪ್ರಯಾಣ ಮಾಡಲು ಉಚಿತ ಬಸ್ ಪಾಸ್‌ಗಳನ್ನು ವಿತರಿಸಲಾಗಿದೆ. ಅಖಿಲ ಭಾರತ ಸ್ವಾತಂತ್ರ್ಯ ಸಂಗ್ರಾಮ ಸೇನಾ ಸಮಿತಿಯವರು ಈ ಬಗ್ಗೆ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ ತಾವು ವಯೋವೃದ್ಧರಾಗಿರುವುದರಿಂದ ಬಸ್‌ಗಳಲ್ಲಿ ಪ್ರಯಾಣ ಮಾಡುವಾಗ ಅನುಕೂಲವಾಗುವಂತೆ ಅವರಿಗೆ ಹೆಚ್ಚಿನ ಸೌಲಭ್ಯವನ್ನು ಕಲ್ಪಿಸಿಕೊಡುವಂತೆ ಕೋರಿರುತ್ತಾರೆ. ರಾಜ್ಯ ಸರ್ಕಾರವು ರಾಜ್ಯದ ಸ್ವಾತಂತ್ರ್ಯ ಯೋಧರ ಉತ್ಕೃಷ್ಟವಾದ ಸೇವೆಯನ್ನು ಸ್ಮರಿಸುತ್ತಾ, ಅವರ ಬಾಳ ಸಂಜೆಯಲ್ಲಿ ಅವರ ಕೋರಿಕೆಯನ್ನು ಮನಗಂಡು ಈ ಕೆಳಕಂಡ ಹೆಚ್ಚಿನ ಅನುಕೂಲಗಳನ್ನು ನೀಡಲು ನಿರ್ಧರಿಸಿದೆ:

(1) ರಾಜ್ಯದ ಎಲ್ಲಾ ಸಾರಿಗೆ ಸಂಸ್ಥೆಗಳ ಸಾಮಾನ್ಯ ವೇಗಧೂತ ಬಸ್‌ಗಳಲ್ಲಿ ಕರ್ನಾಟಕ ರಾಜ್ಯದ ಗಡಿಯಿಂದಾಚೆಗೆ ಉಚಿತವಾಗಿ ಪ್ರಯಾಣ ಮಾಡುವ ಅವಕಾಶ.

(2) 75 ವರ್ಷಗಳು ಹಾಗೂ ಮೇಲ್ಪಟ್ಟು ಸ್ವಾತಂತ್ರ್ಯ ಯೋಧರು ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಗಳ ಸಾಮಾನ್ಯ ವೇಗಧೂತ ಬಸ್‌ಗಳಲ್ಲಿ ರಾಜ್ಯದ ಗಡಿಯೊಳಗೆ ಹಾಗೂ ಗಡಿಯಾಚೆಗೆ ಪ್ರಯಾಣ ಮಾಡುವಾಗ ಅವರ ಸಹಾಯಕ್ಕಾಗಿ ಅವರೊಂದಿಗೆ ಒಬ್ಬರು ಸಹಾಯಕರನ್ನು ಉಚಿತವಾಗಿ ಕರೆದುಕೊಂಡು ಹೋಗುವ ಸೌಲಭ್ಯ.

ಅಂದರೆ ವಯಸ್ಸಾದ ಸ್ವಾತಂತ್ರ್ಯ ಹೋರಾಟಗಾರರಿಗೆ ಒಬ್ಬರು ಅಸಿಸ್ಟೆಂಟ್ ಬೇಕೆಂದು ಹೇಳಿ ಕೇಳಿದ್ದರು. ಅವರಿಗೆ ಅಸಿಸ್ಟೆಂಟನ್ನು ಕೊಡುವ ಬಗ್ಗೆ ನಾವು ಒಪ್ಪಿಕೊಂಡಿದ್ದೇವೆ. ಆ ಪಾಸನ್ನು ನಾವು ಕೊಡುತ್ತೇವೆ. ಮೊದಲನೆಯದಾಗಿ ಅವರು ಬರೀ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾತ್ರ ಕೊಡುತ್ತಾರೆ, ಇಲ್ಲಿ ಮದ್ರಾಸ್‌ಗೆ ಹೋಗಬೇಕಾದರೆ ಇಲ್ಲ. ಹೊಸೂರಿಗೆ ಹೋಗಬೇಕಾದರೆ ಇಲ್ಲ. ಅಥವಾ ತಿರುಪತಿಗೆ ಹೋಗಬೇಕಾದರೂ ಇಲ್ಲ. ಅದಕ್ಕೆ ದಯವಿಟ್ಟು ಗಡಿ ಹೊರಗಡೆಗೂ ಕೂಡ ಕೊಡಬೇಕೆಂದು ಹೇಳಿದ್ದರು. ಆ ಒಂದು ಸವಲತ್ತು ಕೊಡುವುದಕ್ಕೂ ನಾವು ಒಪ್ಪಿಕೊಂಡಿದ್ದೇವೆ. ಸ್ವಾತಂತ್ರ್ಯ ಹೋರಾಟಗಾರರಿಗೆ ಈ ಎರಡು ಸವಲತ್ತುಗಳನ್ನು ಇವತ್ತು ಅವರ ಬೇಡಿಕೆ ಪ್ರಕಾರ ನಾವು ಕೊಡುತ್ತಿದ್ದೇವೆ. ದೊರೆಸ್ವಾಮಿಯವರು ಬಂದು ಸ್ವತಃ ಸುಮಾರು ಹತ್ತು ಜನ ಸ್ವಾತಂತ್ರ್ಯ ಹೋರಾಟಗಾರರು ಮೊನ್ನೆ ನನ್ನನ್ನು ಭೇಟಿಯಾಗಿದ್ದರು. ನಾನು ಇದನ್ನು ಮಾಡಿಸಿ ಕೊಡುತ್ತೇನೆಂದು ಹೇಳಿದ್ದೇನೆ. ಆ ಒಂದು ವಾಗ್ದಾನವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಇವತ್ತು ಅವರಿಗೆ ಸಹಾಯ ಮಾಡತಕ್ಕದ್ದನ್ನು ಮಾಡುತ್ತಿದ್ದೇವೆ. ಸುಮಾರು 4500 ಜನರು ತಮಗೆ ಗೊತ್ತಿರುವಂತೆ ಹೆಚ್ಚಿಗೆ 75 ವಯಸ್ಸಿನ ಮೇಲೆಯೇ ಇದ್ದಾರೆ. ಇದರ ಒಳಗಡೆ ಇರತಕ್ಕಂಥವರ ಪ್ರಶ್ನೆ ಬರುವುದಿಲ್ಲ. ಅದಕ್ಕೆ ಇದೊಂದು ದೊಡ್ಡ ಅನುಕೂಲ ಅವರಿಗೆ ಆಗುತ್ತದೆ ಎನ್ನುವ ಮಾತನ್ನು ಹೇಳಿ ಈ ಸದನದ ಮುಖಾಂತರ ನಾನು ಈ ಸಂದೇಶವನ್ನು ಕಳುಹಿಸುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ನಿಮಗೆ ಅಭಿನಂದನೆಗಳು. ಇದರ ಬಗ್ಗೆ ನಾನು ಈ ಸದನದಲ್ಲಿ ಮಾತನಾಡಿದ್ದೆ. ನಿಮ್ಮಲ್ಲಿ ಒಂದು ಕೇಳಿಕೊಳ್ಳುವುದೆಂದರೆ 75 ವಯಸ್ಸು ಎಂದು ನಿಗದಿಪಡಿಸಬೇಡಿ. ಏಕೆಂದರೆ 75 ವಯಸ್ಸಿನ ಕೆಳಗಿನವರಿಗೆ ಕೆಲವೊಮ್ಮೆ ಒಬ್ಬೊಬ್ಬರಿಗೆ ಓಡಾಡಲಿಕ್ಕೆ ಕಷ್ಟವಾಗಬಹುದು. ಅದನ್ನು ನಿಗದಿಪಡಿಸಿದಾಗ ಸಮಸ್ಯೆ ಆಗುತ್ತದೆ. ಏಕೆಂದರೆ ಸ್ವಾತಂತ್ರ್ಯ ಯೋಧರೇ ಇರುವುದು ಕಡಿಮೆ ಜನ. ಅವರೆಲ್ಲರಿಗೂ ವಯಸ್ಸು ಜಾಸ್ತಿಯಾಗಿರುತ್ತದೆ. ಅಂಥವರಿಗೆ ಏತಕ್ಕೆ ವಯಸ್ಸನ್ನು ನಿಗದಿಪಡಿಸಬೇಕು? ಅದಕ್ಕೋಸ್ಕರ ವಯಸ್ಸನ್ನು ನಿಗದಿಪಡಿಸುವುದನ್ನು ತೆಗೆದುಬಿಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಅವರು ಕೇಳಿದ್ದು 80 ವರ್ಷದ ಮೇಲೆ ಇರುವವರಿಗೆ ಕೊಡಿ ಎಂದು. ನಾನು ಏನೆಂದೆ ಅಂದರೆ 80 ವರ್ಷ ವಯಸ್ಸಿನವರಿಗೆ ಕೊಟ್ಟರೆ ಬೇರೆಯವರು ಬಂದು ಕೇಳುತ್ತಾರೆ. ಅದಕ್ಕೆ ಒಂದು ವಯಸ್ಸು ನಿಗದಿ ಮಾಡಿ 75ಕ್ಕೆ ಮಾಡುತ್ತೇನೆಂದು ನಾನೇ 5 ವರ್ಷ ಕಡಿಮೆ ಮಾಡಿ ಮಾಡಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಇಷ್ಟೆಲ್ಲಾ ಮಾಡಿದವರು ಅದನ್ನು ತೆಗೆದುಬಿಡಿ ದೊಡ್ಡ ನಷ್ಟವೇನೂ ಆಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೋಡಿ, ಆದಾದರೆ ಏನಾಗುತ್ತದೆಂದರೆ, ಗೋವ ಫ್ರೀಡಂ ಫೈಟರ್, ಅವರು ಇವರೆಂದು ಈಗಾಗಲೇ ದೊಡ್ಡ ಕಾಂಟ್ರವರ್ಸಿಯಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಇದನ್ನು ಕೇವಲ ಸ್ವಾತಂತ್ರ್ಯ ಯೋಧರಿಗೆ ಮಾಡಿದ್ದು, ಅದರಲ್ಲಿ ನಾವು ಕೇಳುತ್ತಿರುವುದು . . . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಗೋವ ವಿಮೋಚನಾ ಹೋರಾಟದಲ್ಲಿ ಭಾಗವಹಿಸಿದವರು ಸ್ವಾತಂತ್ರ್ಯ ಹೋರಾಟಗಾರರಲ್ಲವೆಂದು ತೀರ್ಮಾನ ಮಾಡಿದ್ದೀರಾ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸ್ವಾತಂತ್ರ್ಯ ಯೋಧರೆಲ್ಲರೂ ಈಗ ಎಂಭತ್ತರ ಗಡಿಯನ್ನು ದಾಟಿದವರು, ಅವರಿಗೆ ಪ್ರಯಾಣದ ಕಾಲದಲ್ಲಿ ಒಬ್ಬ ಸಂಗಾತಿಯ ಅವಶ್ಯಕತೆ ಇದೆ, ರಾಜ್ಯದ ಯಾವುದೇ ಬಸ್‌ಗಳಲ್ಲಿ ತಾರತಮ್ಯಕ್ಕೆ ಅವಕಾಶ ನೀಡದೆ, ಎಲ್ಲಾ ಬಸ್‌ಗಳಲ್ಲೂ ಸ್ವಾತಂತ್ರ್ಯ ಯೋಧರಿಗೆ ಒಬ್ಬ ಸಂಗಾತಿಯೊಡನೆ ಪ್ರಯಾಣಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ಅವರು ಕೇಳಿದ್ದಾರೆ, ನಾನು ಇನ್ನೂ ಕಡಿಮೆ ಮಾಡಿ ಕೊಟ್ಟಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದಲ್ಲ ಪ್ರಶ್ನೆ ಗೋವ ವಿಮೋಚನ ಹೋರಾಟಗಾರದ್ದನ್ನು ಏನೆಂದು ತೀರ್ಮಾನ ಮಾಡಿದ್ದೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಎಲ್ಲರೂ ಎಂದು ಹೇಳಿಲ್ಲ, ಅದರಲ್ಲಿ ಸಾಕಷ್ಟು ಯುವಕರು ಅವರು ಇವರು ಎಲ್ಲಾ ಕೊಟ್ಟ ಮೇಲೆ, ಅದರಲ್ಲಿ ಸಾಕಷ್ಟು ಜನ ಯಾರು ಸ್ವಾತಂತ್ರ್ಯ ಹೋರಾಟಗಾರರಲ್ಲ ಅವರ ಸಂಖ್ಯೆಯೇ ಜಾಸ್ತಿ ಇತ್ತು ಅದಕ್ಕೆ ಒಂದು ತನಿಖೆ ಮಾಡಿ ಅದರಲ್ಲಿ ಸಾಕಷ್ಟು ಅಪ್ರತಪ್ರ ಇದೆ ಎಂದು ಅದನ್ನು ನಿಲ್ಲಿಸಿದರು. ಆ ಕಾರಣದಿಂದ ನಾವು ಈ ಒಂದು ವಯೋಮಿತಿಯನ್ನು ಏತಕ್ಕೆ ಹಾಕಿದ್ದೇವೆಂದರೆ, ಅಲ್ಲೂ 75 ವಯಸ್ಸುಳ್ಳವರು ಇದರೊಳಗೆ ಬರುತ್ತಾರೆ. ವಿಶೇಷವಾಗಿ ಇದನ್ನು ನಾವು ಮಾಡಿದ್ದು ಏತಕ್ಕೇಂದರೆ, ಮಿಸ್‌ಯೂಸ್ ಆಗಬಾರದೆನ್ನುವ ಕಾರಣಕ್ಕೆ ಮಾಡಿದ್ದೇವೆಯೇ ಹೊರತಾಗಿ, ಅವರಿದ್ದಾರೆ, ಇವರಲ್ಲ ಎನ್ನತಕ್ಕ ಪ್ರಶ್ನೆಯಲ್ಲ, ದೇಶದ ಸ್ವಾತಂತ್ರ್ಯಕ್ಕೆ ಅದು ಗೋವಇರಬಹುದು, ಭಾರತದೇಶ ಇರಬಹುದು ಇಡೀ ದೇಶದ ಒಂದು ಚಳುವಳಿಯಲ್ಲಿ ಭಾಗವಹಿಸಿದ ಪ್ರಕ್ರಿಯೆ ಇರಬಹುದು ಅದರ ಬಗ್ಗೆ ನಾವು ಮಾತನಾಡುತ್ತಿಲ್ಲ ಮತ್ತೆ ಅದನ್ನು ಗುರುತಿಸತಕ್ಕಂಥವರು ನಾವಲ್ಲ. ಹೋಂ ಡಿಪಾರ್ಟ್‌ಮೆಂಟ್‌ನವರು ಐಡೆಂಟಿಫೈ ಮಾಡಿ ಸರ್ಟಿಫಿಕೇಟ್‌ಗಳನ್ನು ನೋಡಿ, ಅವರು ಡಿಕ್ಲೇರ್ ಮಾಡುತ್ತಾರೆಯೇ ಹೊರತು ನಾವು ಮಾಡತಕ್ಕಂಥದ್ದಲ್ಲ. ಯಾರು ಸ್ವಾತಂತ್ರ್ಯ ಯೋಧರೆನ್ನುವ ಒಂದು ಐಡೆಂಟಿಟಿ ಕಾರ್ಡ್ ಅಥವಾ ಪರ್ಮಿಟ್ ಕೊಡುತ್ತಾರೋ ಅಂತಹವರಿಗೆ ಮಾತ್ರ ನಾವು ಕೊಡುತ್ತೇವೆ.

ಅಧ್ಯಕ್ಷರು: ಈಗ ಇಂಡಿಪೆಂಡೆಂಟ್ ಮೆಂಬರ್ಸ್ ಮಾತನಾಡುತ್ತೀರಾ?